Dd-301
T.P-2
(1)

51st Year of Publication ★ SATYAVADI Daily, MYSORE 4

Reg No B G 155 ಶ್ರೀ. 15-5-1968

ಪ್ರಮುಖ ನಕ್ಷತ್ರಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ
ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತನ್ನು ಪ್ರಕಟಿಸಿ

ಸ್ಥಳದಲ್ಲಿ ತಿಂಗಳಿಗೆ ಚಂದಾ 40 ಪೈಸೆ
ಅಂಚೇವೆಚ್ಚ ಸೇರಿ ವರ್ಷಕ್ಕೆ ರೂ 10-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ. 2

ಸತ್ಯವಾದಿ

Space available

For Permanent Advertisement

ಸ್ಥಾಪಕರು : ತನುಮನ ಪರಿತ್ಯಾಗಿ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಪರಮಾಣು ಸಂಬಂಧದ ಒಪ್ಪಂದಕ್ಕೆ ಭಾರತದ ರುಜು ಇಲ್ಲ

ಮೈಸೂರು ಅಶೋಕಾ ಟಾಕೀಸ್ ಬಳಿ ಹಾಕಿರುವ ತಮ್ಮ ಸ್ವಂತ ಭವ್ಯ
ಥಿಯೇಟರಿನಲ್ಲಿ ಪ್ರತಿ ದಿನ ಸಂಜೆ 6-30 ರಿಂದ 12-30 ರ ವರೆಗೆ

ವಿವಿಧ ವಿನೋದ Pastime & sports

ಸುಪ್ರಸಿದ್ಧ ನರ್ತಕಿಯರಿಂದ ವಿವಿಧ ತರದನೃತ್ಯಗಳು, ಹೈದರಾಬಾದಿನ ಸುಪ್ರಸಿದ್ಧ ಜಾದುಗಾರ ಶ್ರೀ ಎಲ್. ಎ. ಬಾಬು ಇವರಿಂದ ಅದ್ಭುತಮಯವಾದ ಇಂದ್ರಜಾಲಾಟ
ನಡೆಯುವ ಮಾತನಾಡುವ ಬೊಂಬೆ, ಎಲೆಕ್ಟ್ರಿಕ್ ಕೂರ್ಚಿ. ಪ್ರವೇಶದರ 25 ಪೈಸೆ

"ಸತ್ಯವಾದಿ" ಯ ಸ್ವರ್ಣೋತ್ಸವ

"ಸತ್ಯವಾದಿ" ಯ ಸ್ವರ್ಣೋತ್ಸವವನ್ನು ಕ್ಷೇತ್ರದಲ್ಲೇ ನೆರವೇರಿಸಲಾಗುವುದು.

ರಾಷ್ಟ್ರಾಧ್ಯಕ್ಷರು, ಪ್ರಧಾನಿಯವರು, ಶ್ರೀಮನ್ಮಹಾರಾಜರು, ಮತ್ತಿತರ ಗಣ್ಯರು ಅಭಿನಂದಿಸಿ ಶುಭ ಕೋರಿರುವರು. ಶ್ರೀ ಶೃಂಗೇರಿ ಮತ್ತು ಶ್ರೀ ದ್ವಾರಕಾ ಜಗದ್ಗುರುಗಳವರು ಶುಭಾಶೀರ್ವಾದ ಮತ್ತು ಧನ ನೆರವು ಅನುಗ್ರಹಿಸಿರುವರು.

ಪತ್ರಿಕೆಗಳ ಸ್ವರ್ಣೋತ್ಸವವು ಅತಿ ವಿರಳ ಮತ್ತು ಮೈಸೂರು ರಾಜ್ಯದಲ್ಲಿ ನಡೆದಂತೆಯೇ ಇದು.

ಸ್ವರ್ಣೋತ್ಸವದ ಪೂರ್ಣ ಯಶಸ್ಸಿಗೆ ಶುಭ ಸಂದೇಶಗಳನ್ನೂ, ಧನನೆರವನ್ನೂ ಉದಾರ ವಿಶ್ವಾಸಗಳಿಂದ ಸಹಕರಿಸಬೇಕೆಂದು ಅನುರೋಧ, ಈಡೇರುವದೆಂದು ಆಶಿಸಿ ಕೃತಜ್ಞತಾಪೂರ್ವವಂದಿಸುತ್ತೇವೆ.

ಸಂಪಾದಕ 'ಸತ್ಯವಾದಿ'
ಚಾಮರಾಜಪುರಂ, ಮೈಸೂರು 4.

ಸ್ತ್ರೀ ಸಾಹಸ

ಖುಷ್ಕೆಂಡು— ಯಾವ ಆಯುಧವೂ, ಒಂದು ದೊಣ್ಣೆಯೂ ಇಲ್ಲದೆ, 7 ಮಂದಿ ಗ್ರಾಮಸ್ಥರು ಸಿಂಧುವಾಲ್ ಚೌಕದ ಹತ್ತಿರ ಒಂದು ಚಿರತೆಯನ್ನು ಬರೀ ಕೈ ಹೊಡೆತದಿಂದಲೇ ಕೊಂದರು : ಎಲ್ಲರೂ ಗಾಯಗೊಂಡಿದ್ದಾರೆ.

★

ಅಕ್ರಮ ಪದಾರ್ಥಗಳ ವಶ

ಬೊಂಬಾಯಿ— ಮಧ್ಯ ಮತ್ತು ಉತ್ತರ ಬೊಂಬಾಯಿನಲ್ಲಿ ಪೋಲೀಸರು ಕೆಲ ಸ್ಥಳಗಳಲ್ಲಿ ನಡೆಸಿದ ಅಕಸ್ಮಾತ್ ಧಾಳಿಗಳಲ್ಲಿ ರೂ. 165630 ಬೆಲೆಯ ಅಕ್ರಮ ಪದಾರ್ಥಗಳನ್ನು ವಶಪಡಿಸಿಕೊಂಡರು.

★

ವಿದೇಶೀ ವಿಷನರಿಗಳು

ಬೊಂಬಾಯಿ— ದೇಶದ ಹಿತಕ್ಕಾಗಿ ವಿದೇಶಿ ಮಿಷನರಿ ಪದ್ಧತಿ ಮುಕ್ತಾಯಗೊಳಿಸಬೇಕೆಂದು ಭಾರತ ರಾಷ್ಟ್ರೀಯ ಚರ್ಚಿನ ಆರ್ಚ್‌ಬಿಷಪ್ ಮತ್ತು ಪ್ರಧಾನ ಗುರು ಹೇಳಿರುವರು.

★

ಕಾಶ್ಮೀರ ವ್ಯಾಜ್ಯ

ಶಾವಲ್ಪಿಂಡಿ— ಭಾರತದೊಡನೆ ಕಾಶ್ಮೀರ ವ್ಯಾಜ್ಯದ ಬಗ್ಗೆ ಮಂತ್ರಿಮಂಡಲ ಮಟ್ಟದ ಮಾತುಕತೆ ಸಧ್ಯಕ್ಕಿಲ್ಲವೆಂದು ಪಾಕಿಸ್ತಾನದ ವಿದೇಶಾಂಗ ಮಂತ್ರಿ ಹೇಳಿದರು.

★

ನೀರಿನಲ್ಲಿ ಮುಳುಗಿಸಿದ್ದ ಚಿನ್ನ

ಉತ್ತರ ಬೊಂಬಾಯಿನಲ್ಲಿ ಮಾಧ್ ದ್ವೀಪಗಳಾಚೆ, ಸಮುದ್ರದಲ್ಲಿ ಹಾಕಲಾಗಿದ್ದ ರೂ. 11 ಲಕ್ಷ ಬೆಲೆಯ ಅಕ್ರಮ ಚಿನ್ನವನ್ನು ಎಕ್ಸೈಸ್ ಅಧಿಕಾರಿಗಳು ತೆಗಿಸಿ ವಶಪಡಿಸಿಕೊಂಡರು.

ಹೊಸ ಮುಖ್ಯ ಮಂತ್ರಿ

ತೆಂಗಳೂರು— ಹೊಸ ಮುಖ್ಯ ಮಂತ್ರಿಯವರ ಆಯ್ಕೆಗೆ ತಾರೀಖು ನಿಷ್ಕರ್ಷಿತವಾಗಿರುವುದರಿಂದ, ಈ ಪದವಿಗೆ ಸ್ಪರ್ಧಿಸಲಿರುವ ಶ್ರೀ ವೀರೇಂದ್ರ ಪಾಟೀಲ್ ಮತ್ತು ಶ್ರೀ ಜತ್ತಿಯವರ ಪರ ಗುಂಪುಗಳ ಚಟುವಟಿಕೆ ನಡೆಯುತ್ತಿರುವುದಾಗಿ ಹೇಳಲಾಗಿದೆ.

★

ಏಸು ಹೇಗಿದ್ದ

ರೋಂ— ಏಸು ಕ್ರಿಸ್ತನು ಉದ್ದವಾಗಿದ್ದು ಸುಂದರ ಮುಖ ಹೊಂದಿದ್ದನೆಂದು ಒಬ್ಬರ ಅಭಿಪ್ರಾಯವಾಗಿದ್ದರೆ, ಆವನು ಕುಳ್ಳಗಿಯೂ ಸಾಧಾರಣ ರೂಪಿನವನೆಂದು ಮತ್ತೊಬ್ಬರ ಅಭಿಪ್ರಾಯವಾಗಿದೆ. ಇಬ್ಬರೂ ಇಟಲೀ ವಿದ್ವಾಂಸರು.

★

ರೇಷನಿಂಗ್

ಮೈಸೂರು— ಎಂದಿನಂತೆ ಫ್ಲಿಕಾರ್ಡು ದಾರರಿಗೆ ಪೂರೈಯಿಸುವ ಪದಾರ್ಥಗಳ ಜೊತೆಗೆ ಈ ತಿಂಗಳಲ್ಲಿ ಪ್ರತಿ ಕಾರ್ಡಿಗೆ ಅರ್ಧ ಕಿಲೊ ರವೆ ಮತ್ತು ಗೋಧಿ ಸರಬರಾಜು ಮಾಡಲಾಗುವುದು.

★

ಆಭಿಪ್ರಾಯ

ಚಂಡೀಘರ— 'ಕಾಂಗ್ರೆಸ್ಸಿಗರು ನನ್ನ ಬೆಂಗಳೂರೇ ಹೊರತು, ನನ್ನ ಯಜಮಾನರಲ್ಲ— ಎಂದು ಪಂಜಾಬು ಮುಖ್ಯ ಮಂತ್ರಿ ಶ್ರೀ ಗಿಲ್ ಹೇಳಿದರು.

★

ವಿಯಟ್ನಾಂನಲ್ಲಿ ಶಾಂತಿ

ಪ್ಯಾರಿಸ್— ಅಮೇರಿಕವು ವಿಯೆಟ್ನಾಂನಲ್ಲಿ ಬಾಂಬು ಮಾಡುವದನ್ನು ನಿಲ್ಲಿಸಿ, ಉತ್ತರ ವಿಯಟ್ನಾಂಗೆ 1000 ಮಿಲಿಯ ಡಾಲರಿಂದ 3000 ಮಿಲಿಯ ಡಾಲರು ಪರಿಹಾರ ಕೊಡಲಿರುವದೆನ್ನಲಾಗಿದೆ.

ಭಾರತದ ರುಜುವಿಲ್ಲ

ವಿಶ್ವಸಂಸ್ಥೆ— ಭಾರತವು ಪರಮಾಣು ಸಂಬಂಧದ ಒಪ್ಪಂದಕ್ಕೆ ರುಜು ಮಾಡುವುದಿಲ್ಲವೆಂದು ಜನರಲ್ ಅಸೆಂಬ್ಲಿಯಲ್ಲಿ ಭಾರತದ ಪ್ರತಿನಿಧಿ ಶ್ರೀ ಹುಸೇನರು ಹೇಳಿದರು.

●

ಸ್ವಯಂಸೇವಕರ ಬಂಧನ

ತೀರ್ಥಹಳ್ಳಿ— ಸ್ಥಳೀಯ ತಾಲ್ಲೂಕು ಕಚೇರಿಯನ್ನು ನಿಷ್ಪಿಕೆಟ್ ಮಾಡಿದ 12 ಎಸ್ಸೆಸ್ಸಿ ಸ್ವಯಂಸೇವಕರನ್ನು ಬಂಧಿಸಲಾಯಿತು.

●

ಇನ್ನೇನೇನು ಬರುತ್ತದೋ ?

ನವದೆಹಲಿ— ರಾಜ್ಯ ಮತ್ತು ಸ್ಥಳೀಯ ಸಂಸ್ಥೆಗಳಲ್ಲಿ ಆರೋಗ್ಯ ವಿಸ್ತರಣೆಗೆ ಆರೋಗ್ಯ ತೆರಿಗೆ ವಿಧಿಸುವ ಸಲಹೆಯನ್ನು ಪ್ಲಾನಿಂಗ್ ಕಮಿಷನ್ ಮಾಡಿದೆ.

●

ರಷ್ಯಾ ಏನನ್ನುತ್ತೆ

ರಷ್ಯವು ಪರ್ಷಿಯಾಕೊಲ್ಲಿ ಭಾಗವತ್ತು ಹಿಂದೂಸಾಗರಕ್ಕೆ ಪ್ರವೇಶದ ಕುತೂಹಲವಿದೆ. ರಷ್ಯಾ ಪ್ರಧಾನಿ ಇರಾನಿಗೆ ಹೆಚ್ಚು ವ್ಯಾಪಾರದ ವಾಗ್ದಾನ ಮಾಡಿದರು — ಪಾಕಿಸ್ತಾನಕ್ಕೆ ಉಕ್ಕಿನ ಗಿರಣಿ, ಪರಮಾಣು ಶಕ್ತಿ ಯಂತ್ರಾಗಾರ ಮತ್ತಿತರ ನೆರವು ವಾಗ್ದಾನ ಮಾಡಿದ್ದಾರೆ — ಪಾಕಿಸ್ತಾನಕ್ಕೆ ಸಹಾಯ ಮಾಡುವುದರಿಂದ, ಭಾರತಕ್ಕೆ ಕೆಂಪು ಚೀನಾ ವಿರುದ್ಧ ಆಯುಧ ನೆರವು ಕಡಮೇ ಮಾಡಲ್ಪಡುವದಿಲ್ಲವೆಂದು ಭಾರತಕ್ಕೆ ತಿಳಿಸಿದ್ದಾರೆ — ಮೆಡಿಟರೇನಿಯೆನ್ನಿನಲ್ಲಿ ರಷ್ಯನರೇ 45 ರಿಂದ 50 ಯುದ್ಧ ಹಡಗುಗಳೂ ಅವುಗಳ ರಕ್ಷಣೆಗೆ ಏರ್‌ಕ್ರಾಫ್ಟ್ ಕ್ಯಾರಿಯರುಗಳೂ ಇದ್ದರೂ ಅವು ಅಮೇರಿಕಾವ ದೊಡ್ಡ ನೌಕಾ ಪಡೆಗೆ ಸಮಾನವಾಗದು— ಎಂದು ಲಂಡನ್ ವರದಿ ತಿಳಿಸುತ್ತದೆ.

ತುಳಸೀದಾಸ್ ಮತ್ತು ಕಳ್ಳ

ತುಳಸೀದಾಸ್ ಹತ್ತಿರ ಒಂದು ಶ್ರೀ ರಾಮನ ವಿಗ್ರಹವಿತ್ತು. ಅದಕ್ಕೆ ಆತನ ಕೆಲವು ಶಿಷ್ಯರು ಪಾತ್ರೆಗಳನ್ನೂ, ಚಿನ್ನ ಬೆಳ್ಳಿ ಆಭರಣಗಳನ್ನೂ ಅರ್ಪಿಸಿದ್ದರು.

ಒಂದು ರಾತ್ರಿ ಒಬ್ಬ ಕಳ್ಳನು ಆಶ್ರಮಕ್ಕೆ ಪ್ರವೇಶಿಸಿ, ತುಳಸೀದಾಸನು ದೇವ ಚಿಂತನೆಯಲ್ಲಿ ಮಗ್ನನಾಗಿದ್ದುದನ್ನು ಕಂಡು, ತನ್ನ ದುಷ್ಕೃತ್ಯಕ್ಕೆ ಅದು ಸರಿಯಾದ ಸಮಯವಾಗಿದೆಯೆಂದುಕೊಂಡು, ಅಲ್ಲಿಯ ಕೆಲವು ಚಿನ್ನದ ಪದಾರ್ಥಗಳನ್ನು ಕದಿಯಲು ಕೈ ಚಾಚಿದ ಸಮಯದಲ್ಲಿ, ಅಲ್ಲಿ ಕಾವಲಿದ್ದ ಕೈನಲ್ಲಿ ಬಿಲ್ಲು ಬಾಣಗಳನ್ನು ಹಿಡಿದಿದ್ದ ಸುಂದರ ಸ್ಫುರದ್ರೂಪಿಯನ್ನು ಕಂಡು ಗಾಬರಿಯಿಂದ ಪರಾರಿಯಾದನು. ಮತ್ತೊಂದು ಸಾರಿ ಹೀಗೆ ಕದಿಯಲು ಪ್ರಯತ್ನಿಸಿದಾಗಲೂ ಹೀಗೇ ಆಯಿತು. ಹೀಗೆ ಕದಿಯಲು ಅನೇಕ ಸಾರಿ ಪ್ರಯತ್ನಿಸಿದರೂ, ಅವನಾಗೆಲ್ಲಾ ಬಿಲ್ಲು ಬಾಣ ಹಿಡಿದಿದ್ದ ಕಾವಲುಗಾರನು ಅಲ್ಲಿದ್ದು ಇವನ ಪ್ರಯತ್ನಗಳೆಲ್ಲಾ ವಿಫಲಗೊಳ್ಳುತ್ತಿತ್ತು. ಇಲ್ಲಿ ಕದಿಯುವದು ಅಸಾಧ್ಯವೆಂದು ಅವನು ಅರಿತರೂ, ಪ್ರತಿ ಸಾರಿಯೂ ಇಷ್ಟು ಎಚ್ಚರಿಕೆಯಿಂದಿರಲು ಯಾವ ಕಾವಲುಗಾರನಿರುತ್ತಾನೆಂಬುದು ಅವನಿಗೆ ಕೌತುಕವಾಗಿ ಕಂಡಿತು ; ಇದರಲ್ಲಿ ಏನೋ ರಹಸ್ಯವಿರಬೇಕೆಂದುಕೊಂಡನು.

ಬೆಳಿಗ್ಗೆ ಅವನು ತುಳಸೀದಾಸನಲ್ಲಿಗೆ ಹೋಗಿ, ತಾನು ಚಿನ್ನಬೆಳ್ಳಿ ವಸ್ತುಗಳನ್ನು ಕದಿಯಲು ಅನೇಕ ಸಾರಿ ಪ್ರಯತ್ನಿಸಿದ್ದನ್ನೂ, ಆದರೆ ಪ್ರತಿಸಾರಿಯೂ ಅಲ್ಲಿ ಅತಿ ಸ್ಫುರದ್ರೂಪಿಯಾದ ಬಿಲ್ಲು ಬಾಣ ಹಿಡಿದಿದ್ದ ಕಾವಲುಗಾರನಿರುತ್ತಿದ್ದುದನ್ನೂ ತಿಳಿಸಿದನು.

ವುಡ್‌ಲಾಂಡ್ಸ್ ಜನಪ್ರಿಯ 2 ನೇ ವಾರ

.... ಸುಬೋಧ್ ಮುಖರ್ಜಿಯವರ ಈಸ್ಟ್‌ಮೆನ್ ಕಲರ್ ಹಿಂದಿ ಚಿತ್ರ ....

ಷಾಗಿರ್ದ್ Shagird

ತಾರಾಗಣ— ಜಾಯ್ ಮುಖರ್ಜಿ, ಸೈರಾಬಾನು, ನಾಜಿರ್ ಹುಸೇನ್
ಅಚ್ಚಲ ಸಹದೇವ್, ಐ. ಎಸ್. ಜೋಹರ್ [ದಿನ 3 ಪ್ರದರ್ಶನ]

ಆಪೇರ— 10-5-68 ರಿಂದ

.... ಅಪೂರ್ವ ಕನ್ನಡ ಚಿತ್ರ ....

ಬೆಂಗಳೂರು ಮೇಲ್

ಪಾತ್ರ : ರಾಜಕುಮಾರ್ ನರಸಿಂಹರಾಜು ಕೊಪ್ಪಾರಕರ್
ಅನ್ವರ್ ಜಯಂತಿ ವಿಜಯಲಲಿತ

ಗೋವಧೆ ಕೂಡಲೆ ನಿಶೇಧವಾಗಲಿ

Cow Slaughter should be banned Immediately

SHAKTI SUDHA

A Superb Tonic

Help The Gorakshana

ಗೋರಕ್ಷಣಾಕ್ಕೆ ಬೆಂಬಲ್ಲ ನೀಡಿ

— ಗೋರಕ್ಷಣ ವ್ಯವಸ್ಥಾಪಕರ ವಿನಂತಿ —

ಗೋರಕ್ಷಣಾಕ್ಕೆ ಲೇಖನಗಳನ್ನೂ ಪ್ರೋತ್ಸಾಹಧನವನ್ನೂ
ವಂದನಾಪೂರ್ವಕವಾಗಿ ಸ್ವೀಕರಿಸಲಾಗುವುದು

ಹಂದಾವಾಯಿದೆ ಕಳೆದಿರುವವರು ಇವರಲ್ಲಿ ಚಂದಾ ಪಾವತಿಮಾಡಬೇಕಾಗಿ ವಿನಂತಿ

ಡಾ|| ಪಿ ಎಸ್ ನಾರಾಯಣ್, ಶ್ರೀ ಪಿಎಸ ವಿಶ್ವನಾಥ್ ಜಯನಗರ, ಬೆಂಗಳೂರು
ಶ್ರೀ ಬಿ ಜಿ. ಶಾಸ್ತ್ರಿಗಳು, 1030 ವಿದ್ಯಾರಣ್ಯಪುರ, ಮೈಸೂರು
ಶ್ರೀ ಅನಂತನಂಸಿಂಹಯ್ಯಂಗಾರ್, ಶಾಸ್ತ್ರಧರ್ಮಪ್ರಚಾರಸಭಾ ಹೊಂಗನೂರ
ಗೋರಕ್ಷಣ ಆಫೀಸು ಸತ್ಯವಾದಿ ಪ್ರೆಸ್ ಚಾಮರಾಜಪುರಂ ಮೈಸೂರು 4
ವಿಳಾಸ — ಗೋರಕ್ಷಣ ಆಫೀಸು 1067 ಚಾಮರಾಜಪುರಂ, ಮೈಸೂರು

Protect the Cow

ಗೋರಕ್ಷಣೆ ಮತ್ತು ಪ್ರಾಣಿದಯಾ ಕಾರ್ಯಗಳು ಹೆಚ್ಚೆಚ್ಚಾಗಿ ನಡೆಯಲಿ
ಶ್ರೀದ್ವಾರಕಾ ಜಗದ್ಗುರು ಮಹಾಸಂಸ್ಥಾನದವರು ಶ್ರೀ ಶೃಂಗೇರಿ ಜಗದ್ಗುರು
ಮಹಾಸಂಸ್ಥಾನಗಳವರ ಆಶೀರ್ವಾದ ಅನುಗ್ರಹ ಪ್ರಾಪ್ತವಾಗಿದೆ
ಕನ್ನಡನಾಡಿನಲ್ಲಿ ಗೋರಕ್ಷಣೆ ಪ್ರಾಣಿದಯೆ, ತಿಂಡಿತಿನಿಸು, ಪಶುವೈದ್ಯ,
ಎಲ್ಲರಲ್ಲಿ ವೈಕ್ಯ ಪ್ರಚಾರ ಮಾಡುವುದಕ್ಕೆ ; ವಾರ್ಷಿಕ ಚಂದಾ 50 ಪೈಸೆ

Quality Printing — Neat Binding

Lakshminarasimha Press

Sivarampet, Mysore

Golden Jubilee of 'Satyavadi'

The golden jubilee of the 'Satyavadi' is to be celebrated very soon.

The President, the Prime Minister, H H. the Maharaja of Mysore, and other personages have extended messages of felicitations and good wishes. Sri Sringeri and Sri Dwaraka Jagadgurujis have favoured blessings and financial aid.

It is welknown that golden jubilee of newspapers in India is rare and almost unknown in Mysore state. The Prime Minister has expressed that it is no small achievement.

Hearty cooperation, extending of messages and donations and gracing the occasion with presence, are fervently solicited with grateful thanks.

Editor, 'Satyavadi' Chamarajapuram, Mysore 4.

Edited, Printed & Published by Dharmaprachara Nirata M. S Krishna Rao (Proprietor) at the Satyavadi Press Chamarajapuram, Mysoe 4